# 'ಸೋಲು ಗೆಲುವಾಗುವುದು, ನೋವು ನಲಿವಾಗುವುದು'

**ಚೇತನ್ ರಾಮ್**

## ಯಶಸ್ಸು ಎಂದರೇನು?

"ಜೀವನ ನಮ್ಮಿಂದ ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಪ್ರಗತಿಯನ್ನು ಬಯಸುತ್ತದೆ."

ಇಪ್ಪತ್ತೊಂದನೇ ಶತಮಾನ, ಯಶಸ್ಸಿಗೆ ಬೇರೆಯೇ ಆದ ಭಾಷ್ಯವನ್ನು ಬರೆಯುತ್ತಿದೆ. ಹಳೆಯ ಸೂತ್ರಗಳೊಂದಿಗೆ ಹೊಸ ಸೂತ್ರಗಳೂ ಚಾಲನೆಗೆ ಬಂದಿವೆ. ಎಲ್ಲ ಆಟವು ಎಲ್ಲದರಲ್ಲೂ ಮೊದಲಿಗನಾಗುವುದೇ ಆಗಿದೆ.

ಬ್ಯಾಟ್ ಹಿಡಿದವರೆಲ್ಲ ಸಚಿನ್ ತೆಂಡೂಲ್ಕರ್ ಆಗಲಿಕ್ಕೆ ಸಾಧ್ಯವಿಲ್ಲ; ಎಲ್ಲ ಇಂಜನಿಯರ್‌ಗಳೂ ವಿಶ್ವೇಶ್ವರಯ್ಯನವರಂತೆ ಆಗಲೂ ಸಾಧ್ಯವಿಲ್ಲ. ಹಾಗೆಯೇ ಓದಿದ ಎಲ್ಲ ವಿದ್ಯಾರ್ಥಿಗಳೂ ಕೂಡ ರ್‍ಯಾಂಕ್ ವಿಜೇತರಾಗಲೂ ಸಾಧ್ಯವಿಲ್ಲ. ಇದರಿಂದ ನಾವು ತಿಳಿದುಕೊಳ್ಳಬೇಕಾದದ್ದು ಏನೆಂದರೆ, ಜಾಗತೀಕರಣದ ಈ ಸ್ಪರ್ಧಾತ್ಮಕ ಪರಿಸರದಲ್ಲಿ ಎಲ್ಲರೂ ಮೊದಲಿಗರಾಗಲು ಆಗುವುದಿಲ್ಲ ಎಂಬುದು. ನಮ್ಮ ಜೀವನದಲ್ಲಿ ಯಶಸ್ಸನ್ನು ಕಾಣಲು ನಾವೇನು ನಂ. ೧ ಆಗಿಯೇ ಇರಬೇಕೆಂಬ ನಿಯಮವೂ ಇಲ್ಲ. ಏಕೆಂದರೆ, ಒಬ್ಬ ಕವಿ ಹೇಳುವಂತೆ, ಈ ಜಗತ್ತಿನ ಪ್ರತಿಯೊಂದು ಜೀವಿಗೂ ತನ್ನದೇ ಆದ ಸ್ವಂತಿಕೆ ಇದೆ. ಆ ಸ್ವಂತಿಕೆ ಅನ್ನುವುದು ಆ ಜೀವಿಗೆ ಜಗತ್ತಿನಲ್ಲಿ ಒಂದು ವಿಶಿಷ್ಟವಾದ ಸ್ಥಾನವನ್ನು ದೊರಕಿಸಿಕೊಡುತ್ತದೆ. ಆ ಸ್ವಂತಿಕೆಯ ಪರಿಪೂರ್ಣ ವಿಕಸನವೇ ನಿಜವಾದ ಯಶಸ್ಸು.

## ಯಶಸ್ಸಿನ ಸಪ್ತ ಸೂತ್ರಗಳು

೧.ಗುರಿ ತಿಳಿದಿರಲಿ. ಗುರಿ ದೊಡ್ಡದಿರಲಿ. ಗುರಿಯೆಡೆಗೆ ಏಕಚಿತ್ತತೆ ಇರಲಿ. ಗುರಿ ಮುಟ್ಟುವ ತನಕ ಪಯಣ ನಿಲ್ಲದಿರಲಿ.

೨.ಅಸಾಧ್ಯವಾದದ್ದು ಯಾವುದೂ ಇಲ್ಲ. ಇತರರಿಗೆ ಸಾಧ್ಯವಾದದ್ದು ನಮಗೂ ಸಾಧ್ಯ ಎಂಬ ಮನೋಭಾವನೆ ಇರಲಿ.

೩.ಸೋಲಿಗೆ ಅಂಜದಿರಿ. ಸೋಲು ಅನುಭವ ನೀಡುತ್ತದೆ. ನಾಳಿನ ಯಶಸ್ಸಿಗೆ ಈ ಸೋಲು ನಾಂದಿ. ಸೋಲೇ ಇಲ್ಲದೆ ಯಶಸ್ಸು ಅಸಾಧ್ಯ.

೪.ಶಿಸ್ತು-ಯಶಸ್ಸು ಒಂದೇ ನಾಣ್ಯದ ಎರಡು ಮುಖಗಳು. ಶಿಸ್ತಿಲ್ಲದ ಜೀವನ ನಾವಿಕನಿಲ್ಲದ ಹಡಗಿನಂತೆ ಅಸ್ತವ್ಯಸ್ತವಾಗಿರುತ್ತದೆ. ಯಾರು-ಯಾರಿಗೆ, ಎಲ್ಲಿ-ಹೇಗೆ-ಯಾವಾಗ ಏನನ್ನು ಹೇಳಬೇಕೋ, ಮಾಡಬೇಕೋ ಅವರು-ಅವರಿಗೆ-ಅಲ್ಲಿ ಹಾಗೆ ಅದನ್ನು ಮಾಡಿಬಿಟ್ಟರೆ ಅದೇ ಶಿಸ್ತು. ಶಿಸ್ತಿದ್ದರೆ ನಂ.೧ ಆಗುವುದು ಸಹಜ-ಸರಳ.

೫. ಇಪ್ಪತ್ತೊಂದನೇ ಶತಮಾನದ ಯಶಸ್ಸಿನ ಪ್ರಮುಖ ಗುಣ ಸಮಯ ನಿರ್ವಹಣೆ. **'ಸಮಯೋ ರಕ್ಷತಿ ರಕ್ಷಿತಃ'** (ನೀವು ಸಮಯವನ್ನು ಕಾಪಾಡಿಕೊಳ್ಳಿ, ಸಮಯ ನಿಮ್ಮನ್ನು ಕಾಪಾಡುತ್ತದೆ). ಸಮಯವನ್ನು ಸೆಕೆಂಡುಗಳಲ್ಲಿ ಅಳೆಯಬೇಕು, ಸಮಯ ಬಲ್ಲವರಿಗೆ ಯಶಸ್ಸು ಕಟ್ಟಿಟ್ಟದ್ದು.

೬. ಭಿನ್ನ ಬಗೆಯ ಕೆಲಸ ಮಾಡಬೇಕು. ಇಲ್ಲವೇ ವಿಭಿನ್ನ ಕೆಲಸಗಳನ್ನು ಭಿನ್ನ ರೀತಿಯಲ್ಲಿ ಅಥವಾ ಒಂದೇ ಕೆಲಸವನ್ನು ವಿಭಿನ್ನ ರೀತಿಯಲ್ಲಿ ಮಾಡಬೇಕು. ಭಿನ್ನತೆಗೂ ಯಶಸ್ಸಿಗೂ ಬಿಡಿಸಲಾಗದ ನಂಟು. ಇದೇ ಸೃಜನಶೀಲತೆ.

೭. ಅತ್ಯಂತ ಮುಖ್ಯವಾದುದು ಉತ್ಸಾಹ. ದೇಹದಲ್ಲಿ ಯೌವನ ಪುಟಿಯಬೇಕು. ಚುರುಕುತನವೇ ಯಶಸ್ಸಿನ ಕಣ್ಣು. ಉತ್ಸಾಹರಹಿತ ಸ್ಥಿತಿಯೆಂದರೆ ಸಾವಿಗೆ ಸಮಾನ.

### ಯಶಸ್ಸಿನ ಮಹಿಮೆ

ನಿಜವಾದ ಯಶಸ್ವಿ ಮನುಷ್ಯ ಯಾರು ಗೊತ್ತೆ? ಬೇರೆಯವರು ಅವನ ಮೇಲೆ ಎಸೆಯುವ (ಟೀಕೆಗಳ) ಇಟ್ಟಿಗೆಗಳನ್ನು ಉಪಯೋಗಿಸಿಕೊಂಡೇ (ತನ್ನ ಯಶಸ್ಸಿನ) ಭದ್ರ ಅಡಿಪಾಯವನ್ನು ಕಟ್ಟುವವನು. – *ಡಾವಿಡ್ ಬ್ರಿಂಕ್ಲೆ*

ನಾನು ಯಶಸ್ಸಿಗೆ ಹೆದರುತ್ತೇನೆ. ಯಶಸ್ಸು ಗಳಿಸಿದೆನೆಂದುಕೊಂಡರೆ, ಈ ಜಗತ್ತಿನಲ್ಲಿನ ಕೆಲಸವನ್ನು ಮುಗಿಸಿಬಿಟ್ಟಂತೆ. ಹೆಣ್ಣು ಜೇಡರ ಹುಳು ದಾಂಪತ್ಯ ಮುಗಿದೊಡನೆ, ಗಂಡನನ್ನು ಕೊಂದುಬಿಡುವುದಂತೆ. ಇದೂ ಅದೇ ತರಹ. ನಾನು ಇಷ್ಟಪಡುವುದು ನಿರಂತರ ಬೆಳವಣಿಗೆಯನ್ನು. ಅದರಲ್ಲಿ *ಗುರಿ* ಯಾವಾಗಲೂ ಮುಂದೆಯೇ ಇರುತ್ತದೇ ಹೊರತು ಅದು ಬೆನ್ನ ಹಿಂದೆ ಇರುವುದಿಲ್ಲ. – *ಜಾರ್ಜ್ ಬರ್ನಾರ್ಡ್ ಶಾ*

## ಸೋಲೇ ಗೆಲುವಿನ ಸೋಪಾನ

ಹಾಡಿನ ಒಂದು ಸಾಲು ಹೀಗಿದೆ: **'ಸೋಲೇ ಗೆಲುವಿನ ಸೋಪಾನ, ದುಡುಕದೆ ನೀ ನಡೆ ಜೋಪಾನ'**

ಯಶಸ್ಸು - ಸ್ಪರ್ಧೆಯಲ್ಲಿ ಬಲು ತೊಡಕಿನ ಅಂಶವೆಂದರೆ ಸೋಲುವ ಭಯ. ಸೋಲಿಗೆ ಹೆದರಿದರೆ ಗೆಲ್ಲಲು ಸಾಧ್ಯವಿಲ್ಲ. ಇರುವುದೆರಡೇ, ಸೋಲು-ಗೆಲುವು. ಇಂದು ಸೋಲು, ಅಂದರೆ ಉಳಿದದ್ದು ನಾಳೆಗೆ ಗೆಲುವು ತಾನೆ? ಸೋಲಾಗಬಾರದೆಂದಿದ್ದರೆ ಪ್ರಯತ್ನವನ್ನೇ ಮಾಡಬಾರದು.

ಥಾಮಸ್ ಅಲ್ವಾ ಎಡಿಸನ್ ಹೀಗೆ ಹೇಳುತ್ತಾನೆ: "ಸೋಲು ಎಂದರೆ ನಿನ್ನಿಂದ ಆಗುವುದಿಲ್ಲ ಎಂದರ್ಥವಲ್ಲ. ಸಾಧ್ಯವಿದೆ. ಆದರೆ ಅದು ನಿನ್ನಿಂದ ಸ್ವಲ್ಪ ಹೆಚ್ಚಿನ ಸಮಯ, ಕೌಶಲವನ್ನು ಕೇಳುತ್ತಿದೆ ಎಂದರ್ಥ."

ಸೋಲುಗಳನ್ನೇ ಮೆಟ್ಟಿಲು ಮಾಡಿ ವಿಮಾನ ಹಾರಿಸಿದ ರೈಟ್ ಸಹೋದರರು; ವಿವಿಧ ಕೆಳಹಂತದ ಚುನಾವಣೆಗಳಲ್ಲಿ ಹತ್ತಾರು ಬಾರಿ ಸೋತರೂ ಬಿಡದೇ ಗೆದ್ದು ಅಮೇರಿಕೆಯ



"ಯಶಸ್ಸು ಕಂಡ ಕಂಡಲ್ಲಿ ಬೆಳೆಯುವ ಕಾಡುಕುಸುಮವಲ್ಲ. ಯಶಸ್ಸು ಆತ್ಮವಿಶ್ವಾಸವುಳ್ಳ, ಸೃಜನಶೀಲ ಮನಸ್ಸುಳ್ಳ, ಶಿಸ್ತುಬದ್ಧತೆಯುಳ್ಳ, ಸಮಯಪ್ರಜ್ಞೆಯುಳ್ಳ, ಚುರುಕಿನ ಉತ್ಸಾಹಿ ವ್ಯಕ್ತಿತ್ವವುಳ್ಳ, ಪವಿತ್ರವಾದ ಹೃದಯಗಳಲ್ಲಿ ಬೆಳೆಯುವ ಮಂದಾರಪುಷ್ಪ." –ಅನಾಮಿಕ

ಅಧ್ಯಕ್ಷರಾದ ಲಿಂಕನ್ ; ಸೋಲಿನಿಂದ ಧೃತಿಗೆಡದೆ, ಅತಿ ಕಿರಿಯ ವಯಸ್ಸಿನಲ್ಲೇ ಜಗತ್ತಿನ ಆರೂ ಖಂಡಗಳಲ್ಲಿನ ಅತಿ ಎತ್ತರದ ಶಿಖರಗಳನ್ನು ಏರಿದ ಕೆನ್ ನೊಗುಚಿ ; ಶೇರ್‌ಷಾನಿಂದ ಅವಮಾನಿತನಾದರೂ ಎದೆಗೆಡದೆ ಬೃಹತ್ ಸೈನ್ಯ ಕಟ್ಟಿ ಮತ್ತೆ ಜಯಗಳಿಸಿ ಮೊಗಲ್ ಸಾಮ್ರಾಜ್ಯವನ್ನು ಕಟ್ಟಿದ ಹುಮಾಯೂನ್, ಅಂಗವಿಕಲರಾದರೂ ಸೋಲಿನ ಅಂಗಳದಿಂದ ಯಶಸ್ಸಿನ ಬಾನಿಗೆ ಜಿಗಿದ ಬೀಥೋವನ್ – ಓಹ್! ಜಗತ್ತಿನಲ್ಲಿ ಸೋಲಿಗೆ ಹೆದರಿದ್ದರೆ ಇವರು ಮತ್ತು ಇವರಂತೆ ನೂರಾರು ಜನರು ಹೊಸದನ್ನು ಕೊಡಲು ಮತ್ತು ಅಸಾಮಾನ್ಯರಾಗಲು ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಕೆ.ಸಿ. ಶಿವಪ್ಪನವರ ಕೆಳಗಿನ ನುಡಿಗಳು ನಮಗೆ ಸೋಲಿನಲ್ಲೂ ಗೆಲವು ಕಾಣುವ ಛಲವನ್ನು ನೀಡುತ್ತದೆ:

**ಸೋಲು ಗೆಲುವಾಗುವುದು, ನಲಿವು ನೋವಾಗುವುದು**
**ಇರದೆಂದು ಒಂದೆ ತೆರ ನಮಗೆ ಜಯ ವಿಜಯ**
**ಚೆಲುವಿನಲಿ ನಸುನಗುತ, ಸೊರಗದಿರು ಬೇನೆಯಲಿ**
**ಸಹಿಸು ನೀ ಕಹಿ ಒಗರ – ಮುದ್ದುರಾಮ.**

## ಮನುಜಧರ್ಮ

ಸೋಲಿನಿಂದ ಮೇಲೆದ್ದು ಯಶಸ್ಸಿನ ರುಚಿ ಉಂಡು, ನಾನೇ ಮುಂದೆಂದು ಎಲ್ಲರ ಜೊತೆಗೂಡಿ, ಜಯದ ಶಿಖರವೇರಿ ಎಲ್ಲರಿಗೂ ಸಂತಸ ನೀಡುತ್ತ, ಬಾಳಿನ ಆಟ ಮುಗಿಯುವ ವೇಳೆಗೆ, ಸುತ್ತಲಿನ ಪರಿಸರದಲ್ಲಿ, ಎಷ್ಟಾದರಷ್ಟು ರಚನಾತ್ಮಕ ಬದಲಾವಣೆ ತಂದು, ಪರಿವರ್ತನೆಯ ಹರಿಕಾರರಾಗುವುದೇ ಮನುಜಧರ್ಮ.

ಅದಕ್ಕಾಗಿ ಯಶಸ್ಸಿನ ನಾಲ್ಕು ಸ್ತಂಭಗಳಾದ **ಜ್ಞಾನ, ಕೌಶಲ, ಮನೋಭಾವ ಮತ್ತು ಪರಿಸರ**ಗಳನ್ನು ನಮ್ಮ ಜೀವನದ ವಿಕಸನದಲ್ಲಿ ಯಥೇಚ್ಛವಾಗಿ ಉಪಯೋಗಿಸಿಕೊಂಡು ನಮ್ಮ ವೈಯಕ್ತಿಕ ಜೀವನದಲ್ಲಿ ಮಾತ್ರವಲ್ಲದೆ, ನಮ್ಮ ಸುತ್ತಲ ಹತ್ತು ಜನರ ಜೀವನಗಳಲ್ಲಿ ಬೆಳವಣಿಗೆಯನ್ನು, ಆಹ್ಲಾದವನ್ನು ನಾವು ತರುವಂತಾಗಬೇಕು. ಇದಕ್ಕಾಗಿ ನಮ್ಮ ಯುವಜನರ ಮನೋಭಾವದಲ್ಲಿಯೇ ಒಂದು ಮೂಲಭೂತವಾದ ಕ್ರಾಂತಿ ಆಗಬೇಕು:

"ನಾವು ಸರ್ವಸಮರ್ಥರು. ಸಕಲವನ್ನೂ ಸಾಧಿಸಬಲ್ಲ ಸಿಂಹ ಶಕ್ತಿ ಇದೆ ನಮ್ಮಲ್ಲಿ. ನಾವು ಏನನ್ನಾದರೂ ಮಾಡಬಲ್ಲೆವು. ನಮ್ಮಿಂದ ಎಲ್ಲವೂ ಸಾಧ್ಯ" – ವಿವೇಕಾನಂದರ ಈ ಧೀರವಾಣಿಯ ಮಂತ್ರದೀಕ್ಷೆಯನ್ನು ನಮ್ಮ ಯುವಕರು ಪಡೆದುಕೊಳ್ಳಬೇಕು.

## ಮಾನವನ ವ್ಯಕ್ತಿತ್ವದ ಹಿರಿಮೆ

"ಜಗತ್ತಿನ ಶ್ರೇಷ್ಠ ಸಂಪತ್ತು ಮಾನವನ ವ್ಯಕ್ತಿತ್ವದಲ್ಲಿ ಅಡಗಿದೆ" ಎಂಬ ವಿಲಿಯಂ ಬ್ರೌನ್‌ಫೀಲ್ಡನ ಮಾತು ಅಕ್ಷರಶಃ ಸತ್ಯ. ಬದಲಾಗುತ್ತಿರುವ ಈ ಯುಗದಲ್ಲಿ ನಾವೂ ಮಾನಸಿಕವಾಗಿ, ಬೌದ್ಧಿಕವಾಗಿ, ಭಾವನಾತ್ಮಕವಾಗಿ ಶಕ್ತಿಯುತರಾಗಬೇಕು. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಬದಲಾಗಬೇಕು. ಇಲ್ಲದಿದ್ದರೆ, ಬಾಹ್ಯ ಜಗತ್ತಿನ ಬದಲಾವಣೆಗಳು, ತಾವೇ ತಾವಾಗಿ ನಮ್ಮನ್ನು ಬದಲು ಮಾಡಿಬಿಡುತ್ತವೆ. ನಿರಂತರ ಉತ್ಸಾಹವಿರಲಿ; ಸ್ವಾಭಿಮಾನಕ್ಕೆ ಯಾವತ್ತೂ ಕೊರತೆ ಇಲ್ಲದಿರಲಿ; ಹಾಗೆಂದು, ನಮ್ಮ ಪ್ರತಿಭೆಯ ಕುರಿತು ಅಹಂಕಾರವೂ ಬೇಡ.

## ಯಶಸ್ಸಿನ ಸ್ವರೂಪ

ಆತ್ಮವಿಶ್ವಾಸ ಮತ್ತು ಸೃಜನಶೀಲತೆ– ಇವೆರಡೂ ಯಶಸ್ಸಿನ ಕಣ್ಣುಗಳು. ಸಮಯ–ಶಿಸ್ತುಗಳು ಪರಿವರ್ತನೆಯ ಕೈಗಳಿದ್ದಂತೆ. ಜ್ಞಾನವು ಯಶಸ್ಸಿನ ಮೆದುಳು. ಪ್ರೀತಿ ಹೃದಯವೇ ಸರಿ. ಉತ್ಸಾಹ ಮತ್ತು ಚುರುಕುತನ ಅದರ ಕಾಲುಗಳು. ಕುಶಲತೆ, ಕುಶಾಗ್ರತೆ ಕಿವಿಗಳಿದ್ದಂತೆ. ಅದರ ಬಾಯಿ ನಮ್ಮ ಬಾಯಿಯಿಂದ ಬರುವ ಸವಿಮಾತು. ನಮ್ಮ ಮುಖದ ತೇಜಸ್ಸೇ ಅದರ ನಗು. ಹೀಗಾಗಿ ಯಶಸ್ಸಿನ ಸ್ವರೂಪ ನಮ್ಮದೇ ರೂಪ. ನಾವೇ ಯಶಸ್ಸಿನ ಎಲ್ಲ ಗುಣಗಳ ಸಂಗಮವಾಗಿದ್ದೇವೆ. ಹೀಗಾಗಿ ಯಶಸ್ಸು ನಮ್ಮ ಹೊರಗೆಲ್ಲಿಂದಲೋ ಬರುವಂಥದಲ್ಲ. ಅದು ನಮ್ಮದೇ ಆಸ್ತಿ. ಅದಕ್ಕೆ ನಾವೇ ವಾರಸುದಾರರು.

**ಜೀವನದಲ್ಲಿ ಕೇವಲ ಯಶಸ್ವಿಯಾಗಬೇಕೆಂದು ಬಯಸಬೇಡಿ. ಚಾರಿತ್ರ್ಯವಂತರಾಗಲು ಪ್ರಯತ್ನಿಸಿ – ಐನ್‌ಸ್ಟೈನ್**